**ಕರ್ನಾಟಕ ಸರ್ಕಾರ**

ಸಂಖ್ಯೆ:ಸಿಆಸುಇ 92 ಆರ್‌ಟಿಐ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ – ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ:25.08.2012

**ಸುತ್ತೋಲೆ**

ವಿಷಯ:ಮೊದಲನೇ ಮೇಲ್ಮನವಿ ಪ್ರಾಧಿಕಾರಿಗಳು ಮಾಹಿತಿ ಹಕ್ಕು ಅಧಿನಿಯಮದಡಿ ಮೊದಲನೇ ಮೇಲ್ಮನವಿಗಳ ಸೂಕ್ತ ವಿಚಾರಣೆ ನಡೆಸಿ ಇತ್ಯರ್ಥಗೊಳಿಸುವ ಬಗ್ಗೆ.

ಉಲ್ಲೇಖ:ಕರ್ನಾಟಕ ಮಾಹಿತಿ ಆಯೋಗದ ಆದೇಶ ಸಂಖ್ಯೆ: ಕಮಾಆ 7191 ದೂರು 2011, ದಿ:13/06/2012.

– – –

ಕರ್ನಾಟಕ ಮಾಹಿತಿ ಆಯೋಗವು ತನ್ನ ಮುಂದೆ ದಾಖಲಾಗಿದ್ದ ಪ್ರಕರಣ ಸಂಖ್ಯೆ: ಕಮಾಆ 7191 ದೂರು 2011 (ಶ್ರೀ ಹೆಚ್.ಎಸ್.ಶಿವಕುಮಾರ್ ವಿರುದ್ಧ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ತಹಶೀಲ್ದಾರ್, ತುಮಕೂರು ತಾಲ್ಲೂಕು, ತುಮಕೂರು)ನ್ನು ದಿನಾಂಕ 13.06.2012ರಂದು ಇತ್ಯರ್ಥಪಡಿಸುತ್ತಾ, ಉಪ ವಿಭಾಗಾಧಿಕಾರಿಗಳು, ತುಮಕೂರು ಹಾಗೂ ಮೊದಲನೇ ಮೇಲ್ಮನವಿ ಪ್ರಾಧಿಕಾರ ಇವರು ಮೇಲ್ಮನವಿಯಲ್ಲಿ ಕೋರಿರುವ ಮಾಹಿತಿಯನ್ನು ಹಾಗೂ ದಾಖಲಾತಿಗಳನ್ನು ಕೂಡಲೇ ಒದಗಿಸಲು ತಹಶೀಲ್ದಾರ್, ತುಮಕೂರು ಇವರಿಗೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಿರುವುದನ್ನು ಗಮನಿಸಿ, ಮೇಲ್ಮನವಿದಾರರಿಗೆ ಮಾಹಿತಿ/ದಾಖಲೆಗಳನ್ನು ನೀಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳದೇ ಮೇಲ್ಮನವಿ ಪ್ರಾಧಿಕಾರಿ ಪ್ರಕರಣ ಮುಕ್ತಾಯಗೊಳಿಸಿರುವುದು ಸರಿಯಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ಮೇಲ್ಮನವಿ ಪ್ರಕರಣಗಳಲ್ಲಿ ನೋಟಿಸ್ ನೀಡಿ, ವಿಚಾರಣೆ ಮಾಡುವುದಲ್ಲದೇ, ವಿಚಾರಣೆಯಲ್ಲಿ ನೀಡಿರುವ ನಿರ್ದೇಶನದಂತೆ ಪ್ರತಿವಾದಿಗಳು ಮಾಹಿತಿ/ದಾಖಲೆಗಳನ್ನು ನೀಡಿದ್ದಾರೆಂದು ಖಚಿತಪಡಿಸಿಕೊಳ್ಳಲು, ಪ್ರತಿವಾದಿಯಿಂದ ಒದಗಿಸಲಾದ ಮಾಹಿತಿಯ ಪ್ರತಿ ಹಾಗೂ ಅವರಿಂದ ಪಡೆದಿರುವ ಸ್ವೀಕೃತಿ/ಅಂಚೆ ಕಛೇರಿಯ ರಸೀದಿಯ ಜೆರಾಕ್ಸ್ ಪ್ರತಿಯನ್ನು ಮೇಲ್ಮನವಿ ಪ್ರಾಧಿಕಾರಿ ಪಡೆದುಕೊಳ್ಳಬೇಕೆಂದು, ತದನಂತರ ಕೊಟ್ಟಿರುವ ಮಾಹಿತಿಯ ಬಗ್ಗೆ ಅರ್ಜಿದಾರರ ಹೇಳಿಕೆಯೇನಾದರೂ ಇದ್ದಲ್ಲಿ ಅದನ್ನು ಸಲ್ಲಿಸಲು ವಿಚಾರಣೆಯನ್ನು ಮುಂದೂಡಿ, ಮುಂದೂಡಿದ ದಿನಾಂಕದಂದು ಅರ್ಜಿದಾರರು ಹಾಜರಾಗಿ, ಹೇಳಿಕೆ ನೀಡಿದ್ದಲ್ಲಿ ಅದನ್ನು ಪರಿಶೀಲಿಸಿ ಸಂದರ್ಭಾನುಸಾರ ಪ್ರತಿವಾದಿಗಳಿಗೆ ನಿರ್ದೇಶನವನ್ನು ನೀಡತಕ್ಕದ್ದೆಂದು ಅಥವಾ ಮೇಲ್ಮನವಿದಾರರು ಮಾಹಿತಿಯ ಬಗ್ಗೆ ಸಲ್ಲಿಸಿರುವ ಆಕ್ಷೇಪಣೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ, ಆದೇಶದಲ್ಲಿ ಕಾರಣಗಳನ್ನು ದಾಖಲಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಬಹುದೆಂದು, ಒಂದು ಪಕ್ಷ ಪ್ರತಿವಾದಿಗಳಿಗೆ ಮುಂದಿನ ನಿರ್ದೇಶನ ನೀಡಿದ್ದಲ್ಲಿ, ವಿಚಾರಣೆಯನ್ನು ಮುಂದೂಡಿ ಮುಂದಿನ ವಿಚಾರಣೆಯಲ್ಲಿನ ನಿರ್ದೇಶನದಂತೆ ಕ್ರಮ ತೆಗೆದುಕೊಳ್ಳಲಾಗಿದೆಯೆ ಎಂಬುದನ್ನು ಖಾತರಿಪಡಿಸಿಕೊಂಡ ನಂತರವೇ ಪ್ರಕರಣವನ್ನು ಮುಕ್ತಾಯಗೊಳಿಸಬಹುದೆಂದು ಕರ್ನಾಟಕ ಮಾಹಿತಿ ಆಯೋಗವು ಅಭಿಪ್ರಾಯಪಟ್ಟಿರುತ್ತದೆ.

ಉಪ ವಿಭಾಗಾಧಿಕಾರಿಗಳು, ತುಮಕೂರು ಹಾಗೂ ಮೊದಲನೇ ಮೇಲ್ಮನವಿ ಪ್ರಾಧಿಕಾರ ಇವರು ಮೇಲಿನ ಕ್ರಮಗಳನ್ನು ಅನುಸರಿಸದೆ ಸದರಿ ಮೇಲ್ಮನವಿ ಪ್ರಕರಣವನ್ನು ಇತ್ಯರ್ಥಗೊಳಿಸಿರುವ ಕ್ರಮ ಸರಿಯಲ್ಲವೆಂದು ತಿಳಿಸುತ್ತಾ, ಉಲ್ಲೇಖಿತ ತನ್ನ ಆದೇಶ ದಿನಾಂಕ 13.06.2012ರಲ್ಲಿ ಮೊದಲನೇ ಮೇಲ್ಮನವಿಗಳನ್ನು ಮೊದಲನೇ ಮೇಲ್ಮನವಿ ಪ್ರಾಧಿಕಾರಗಳು ಸರಿಯಾಗಿ ಇತ್ಯರ್ಥಗೊಳಿಸುವಲ್ಲಿ ವಿವರವಾದ ಸೂಚನೆಗಳನ್ನು ನೀಡುವಂತೆ ಸರ್ಕಾರಕ್ಕೆ ಸೂಚಿಸಿರುತ್ತದೆ.

ಮಾಹಿತಿ ಹಕ್ಕು ಅಧಿನಿಯಮ 2005ರಡಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳು, ಮಾಹಿತಿ ಕೋರಿಕೆ ಅರ್ಜಿಗಳಿಗೆ ಸಂಬಂಧಿಸಿದಂತೆ, ಅಧಿನಿಯಮದ ಪ್ರಕರಣ 7, 8, 9, 10, 11ಗಳಡಿ ಒದಗಿಸಲಾದ ಅವಕಾಶಗಳನ್ವಯ ಕಾರ್ಯನಿರ್ವಹಿಸಬೇಕಾಗುತ್ತದೆ. ಆದಾಗ್ಯೂ ಕೆಲವು ಸಂದರ್ಭಗಳಲ್ಲಿ ಅರ್ಜಿದಾರರಿಗೆ ಸಾರ್ವಜನಿಕ ಮಾಹಿತಿ ಅಧಿಕಾರಿಯಿಂದ ನಿಗದಿತ ಅವಧಿಯಲ್ಲಿ ಮಾಹಿತಿ ದೊರಕದೇ ಇದ್ದ ಪಕ್ಷದಲ್ಲಿ ಅಥವಾ ಅಪೂರ್ಣ ಮಾಹಿತಿ ಎನಿಸಿದ ಪಕ್ಷದಲ್ಲಿ ಅವರಿಗೆ ಮಾಹಿತಿ ಹಕ್ಕು ಅಧಿನಿಯಮದ ಪ್ರಕರಣ 19(1)ರಡಿ ಮೊದಲ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಮೊದಲ ಮೇಲ್ಮನವಿ ಪ್ರಾಧಿಕಾರಿಯು ಸಂಬಂಧಿಸಿದ ಸಾರ್ವಜನಿಕ ಪ್ರಾಧಿಕಾರದಿಂದ ನೇಮಕವಾದ, ಸಾರ್ವಜನಿಕ ಮಾಹಿತಿ ಅಧಿಕಾರಿಗಿಂತ ಹಿರಿಯ ಅಧಿಕಾರಿಯಾಗಿದ್ದು, ಸಾರ್ವಜನಿಕರಿಂದ ಸ್ವೀಕರಿಸುವ ಮೊದಲ ಮೇಲ್ಮನವಿಗಳನ್ನು ನಿಗದಿತ ಕಾಲಾವಧಿಯೊಳಗೆ ಇತ್ಯರ್ಥಗೊಳಿಸುವಾಗ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕಾಗುತ್ತದೆ:

ಎ) ಮೊದಲನೇ ಮೇಲ್ಮನವಿಯನ್ನು ನಿಗದಿಪಡಿಸಲಾದ ಕಾಲಮಿತಿಯೊಳಗಾಗಿ ಇತ್ಯರ್ಥ ಮಾಡಬೇಕಾಗಿರುವುದರಿಂದ, ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಸಲ್ಲಿಸಲಾದ ಮೇಲ್ಮನವಿಯನ್ನು ವಿಚಾರಣೆ ಮಾಡಲು ವಾರದಲ್ಲಿ ಒಂದು ನಿರ್ದಿಷ್ಟವಾದ ದಿನಾಂಕವನ್ನು ನಿಗಧಿಗೊಳಿಸಬೇಕು. ಆ ದಿನ ಮಾಹಿತಿ ಕೋರಿಕೆ ಮೇಲ್ಮನವಿ ಬಿಟ್ಟರೆ ಬೇರೆ ಯಾವುದೇ ಮೇಲ್ಮನವಿ ಇಟ್ಟುಕೊಳ್ಳಬಾರದು. ವಿಚಾರಣೆ ಮುಂದೂಡಬೇಕಾಗುವ ಸಂದರ್ಭಗಳಲ್ಲಿ, ಪ್ರಕರಣವನ್ನು ಒಂದು ವಾರಕ್ಕೆ ಮುಂದೂಡಬಹುದು. ಕಾಲಮಿತಿಯೊಳಗಾಗಿ ಮೇಲ್ಮನವಿಗಳನ್ನು ಇತ್ಯರ್ಥಗೊಳಿಸಬೇಕಾಗಿರುವುದರಿಂದ, ಯಾವುದೇ ಕಾರಣಕ್ಕೂ ವಿಚಾರಣೆಯನ್ನು ದೀರ್ಘಾವದಿಗೆ ಮುಂದೂಡಬಾರದು.

ಬಿ) ಮೇಲ್ಮನವಿ ಪ್ರಕರಣಗಳಲ್ಲಿ ನೋಟಿಸ್ ನೀಡಿ, ವಿಚಾರಣೆ ಮಾಡುವುದಲ್ಲದೇ, ವಿಚಾರಣೆಯಲ್ಲಿ ನೀಡಿರುವ ನಿರ್ದೇಶನದಂತೆ ಪ್ರತಿವಾದಿಗಳು ಮಾಹಿತಿ/ದಾಖಲೆಗಳನ್ನು ನೀಡಿದ್ದಾರೆಂದು ಖಚಿತಪಡಿಸಿಕೊಳ್ಳಲು, ಪ್ರತಿವಾದಿಯಿಂದ ಒದಗಿಸಲಾದ ಮಾಹಿತಿಯ ಪ್ರತಿ ಹಾಗೂ ಅವರಿಂದ ಪಡೆದಿರುವ ಸ್ವೀಕೃತಿ/ಅಂಚೆ ಕಛೇರಿಯ ರಸೀದಿಯ ಜೆರಾಕ್ಸ್ ಪ್ರತಿಯನ್ನು ಮೇಲ್ಮನವಿ ಪ್ರಾಧಿಕಾರಿ ಪಡೆದುಕೊಳ್ಳಬೇಕು. ತದನಂತರ ಕೊಟ್ಟಿರುವ ಮಾಹಿತಿಯ ಬಗ್ಗೆ ಅರ್ಜಿದಾರರ ಹೇಳಿಕೆಯೇನಾದರೂ ಇದ್ದಲ್ಲಿ ಅದನ್ನು ಸಲ್ಲಿಸಲು ವಿಚಾರಣೆಯನ್ನು ಮುಂದೂಡಿ, ಮುಂದೂಡಿದ ದಿನಾಂಕದಂದು ಅರ್ಜಿದಾರರು ಹಾಜರಾಗಿ, ಹೇಳಿಕೆ ನೀಡಿದ್ದಲ್ಲಿ ಅದನ್ನು ಪರಿಶೀಲಿಸಿ ಸಂದರ್ಭಾನುಸಾರ ಪ್ರತಿವಾದಿಗಳಿಗೆ ನಿರ್ದೇಶನವನ್ನು ನೀಡತಕ್ಕದ್ದು

ಅಥವಾ ಮೇಲ್ಮನವಿದಾರರು ಮಾಹಿತಿಯ ಬಗ್ಗೆ ಸಲ್ಲಿಸಿರುವ ಆಕ್ಷೇಪಣೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದಿದ್ದಲ್ಲಿ, ಆದೇಶದಲ್ಲಿ ಕಾರಣಗಳನ್ನು ದಾಖಲಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಬಹುದು. ಒಂದು ಪಕ್ಷ ಪ್ರತಿವಾದಿಗಳಿಗೆ ಮುಂದಿನ ನಿರ್ದೇಶನ ನೀಡಿದ್ದಲ್ಲಿ, ವಿಚಾರಣೆಯನ್ನು ಮುಂದೂಡಿ ಮುಂದಿನ ವಿಚಾರಣೆಯಲ್ಲಿನ ನಿರ್ದೇಶನದಂತೆ ಕ್ರಮ ತೆಗೆದುಕೊಳ್ಳಲಾಗಿದೆಯೆ ಎಂಬುದನ್ನು ಖಾತರಿಪಡಿಸಿಕೊಂಡ ನಂತರವೇ ಪ್ರಕರಣವನ್ನು ಮುಕ್ತಾಯಗೊಳಿಸಬಹುದು.

ಸಿ) ಮೇಲ್ಮನವಿಯ ವಿಚಾರಣೆಯಲ್ಲಿ, ಮೇಲ್ಮನವಿದಾರರು ಗೈರುಹಾಜರಾದಲ್ಲಿ ಪ್ರತಿವಾದಿಗಳು ಕೇಳಿರುವ ಮಾಹಿತಿ ಸರಿಯಾಗಿ ಹಾಗೂ ಪೂರ್ಣವಾಗಿ ಅರ್ಜಿದಾರರಿಗೆ ಕೊಟ್ಟಿದ್ದಾರೆಂದು ಮೊದಲನೇ ಮೇಲ್ಮನವಿ ಪ್ರಾಧಿಕಾರ ಖಚಿತಪಡಿಸ ಕೊಳ್ಳತಕ್ಕದ್ದು ಹಾಗೂ ತಪ್ಪು ಮಾಹಿತಿ ಅಥವಾ ಅಪೂರ್ಣ ಮಾಹಿತಿ ಕೊಟ್ಟಿರುವುದು ಕಂಡುಬಂದಲ್ಲಿ ಸರಿಯಾದ ಹಾಗೂ ಪೂರ್ಣವಾದ ಮಾಹಿತಿ ನೀಡುವ ತನಕ ಮೇಲ್ಮನವಿ ಪ್ರಕರಣವನ್ನು ಮುಕ್ತಾಯಗೊಳಿಸಬಾರದು.

ಮೇಲಿನ ಸೂಚನೆಗಳನ್ನು ಪಾಲಿಸುವಂತೆ ತಮ್ಮ ಆಡಳಿತಾಧೀನದ ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳ, ಮೇಲ್ಮನವಿ ಪ್ರಾಧಿಕಾರಿಗಳಿಗೆ ಸೂಚಿಸುವಂತೆ ಕೋರಿದೆ.

(ಲ.ವೆಂಕಟಗಿರಿಯಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ ಸುಧಾರಣೆ – ಜನಸ್ಪಂದನ – ಮಾಹಿತಿ ಹಕ್ಕು)

**ಇವರಿಗೆ.**

1.ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2.ಎಲ್ಲಾ ಇಲಾಖಾ ಮುಖ್ಯಸ್ಥರುಗಳು
3.ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4.ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು

**ಪ್ರತಿ:– ಮಾಹಿತಿಗಾಗಿ**

1.ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ
2.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಆಇ – ಜನಸ್ಪಂದನ)
3.ಸರ್ಕಾರದ ಅಪರ ಕಾರ್ಯದರ್ಶಿಗಳು, ಸಿಆಸುಇ (ಆಸು – ಜನಸ್ಪಂದನ)
4.ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹು ಮಹಡಿ ಕಟ್ಟಡ.
5.ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು